JETIR.ORG ISSN: 2349-5162 | ESTD Year : 2014 | Monthly Issue
JOURNAL OF EMERGING TECHNOLOGIES AND INNOVATIVE RESEARCH (JETIR)
An International Scholarly Open Access, Peer-reviewed, Refereed Journal

# ಶೆಟ್ಟಿಕೆರೆ ಗ್ರಾಮದ ಯೋಗಮಾಧವ ದೇವಾಲಯ : ಒಂದು ಅವಲೊಕನ

**ಸುನಿಲ್ ಚೌಧರಿ ಎ**
ಸಂಶೋಧನಾ ವಿದ್ಯಾರ್ಥಿ
ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವಶಾಸ್ತ್ರ ವಿಭಾಗ
ಮಾನಸಗಂಗೋತ್ರಿ ಮೈಸೂರು

ಶೆಟ್ಟಿಕೆರೆ ಚಿಕ್ಕನಾಯಕನಹಳ್ಳಿಯಿ ತಾಲ್ಲೂಕು ಕೇಂದ್ರ ದಿಂದ 8 ಕಿ.ಮೀ. ನೈಋತ್ಯಕ್ಕೆ ಭಾಗಕ್ಕಿದೆ. ಪ್ರಸ್ತುತವಾಗಿ ಹೋಬಳಿ ಕೇಂದ್ರವು ಹೌದು. ಹೊಯ್ಸಳರ ಕಾಲದಲ್ಲಿ ಸೆಟ್ಟಿಕೆರೆ ಅಥವಾ ಸೆಟ್ಟಕೆರೆಯು ಸೆಟ್ಟ ಎಂಬ ಜನವರ್ಗದಿಂದ ಕೂಡಿದ್ದು, ವಿಶಾಲವಾದ ಕೆರೆಯು ಊರಿನ ನೈಋತ್ಯಕ್ಕಿದ್ದು, ಇದರಿಂದ ಈ ಊರನ್ನು ಸೆಟ್ಟಿಕೆರೆ ಎಂದು ಕರೆಯಲಾಯಿತು. ಅಲ್ಲದೆ ಇದು ಪ್ರಾಚೀನ ಕಾಲದಲ್ಲಿ ಮಹಾಜನರಿಂದ ಕೂಡಿದ ಅಗ್ರಹಾರವು ಆಗಿದ್ದಿತು. ಸುಮಾರು 13ನೇ ಶತಮಾನದಲ್ಲಿ ಈ ಹಳ್ಳಿಯ ಹೆಸರು 'ಸೆಟ್ಟಿಯಕೆರೆ' ಎಂದಿದ್ದು 'ಶ್ರೀಭರಿತಪ್ರಕಾಶಪುರಿ' ಎಂಬ ಅಭಿದಾನವನ್ನು ಹೊಂದಿದ್ದು, ಸೆಟ್ಟಿಕೆರೆಯಲ್ಲಿ ಕುಮಾರವ್ಯಾಸನ ಕಾಲದ ತಾಳೆಗರಿಯ ಹಸ್ತಪತ್ರಿಗಳು ದೊರತಿರುತ್ತವೆ.

ಹೊಯ್ಸಳರ ದೊರೆ ಮೂರನೇ ನರಸಿಂಹನ ಮಹಾಪ್ರಧಾನಿ ಗೋಪಾಲ ದಂಡನಾಯಕನು ತನ್ನ ದೊರೆಯಿಂದ ಅಸಂದಿನಾಡಿನ ಹುಳಿಯಾರು ಪ್ರಾಂತ್ಯಕ್ಕೆ ಸೇರಿದ ಶೆಟ್ಟಕೆರೆ ಹಾಗೂ ಹೊಸಕೆರೆಯನ್ನು ಪಡೆದು ಶೆಟ್ಟೀಕೆರೆಯನ್ನು 'ಶ್ರೀಭರಿತ ಪ್ರಕಾಶಪುರ'ವೆಂದು ನಾಮಕರಣ ಮಾಡಿ ಅದನ್ನು ಅಗ್ರಹಾರವಾಗಿ ಪರಿವರ್ತಿಸಿ ಕ್ರಿ.ಶ.1261ರಲ್ಲಿ ಯೋಗಮಾಧವ ದೇವಾಲಯವನ್ನು ನಿರ್ಮಿಸಿದನೆಂದು ದೇವಾಲಯದಲ್ಲಿ ದೂರಕಿರುವ ಶಾಸನದಿಂದ ಈ ಅಂಶ ತಿಳಿದುಬರುತ್ತದೆ.

ಗೋಪಾಲ ದಂಡನಾಯಕನು ತನ್ನ ದೊರೆಯಿಂದ ಶೆಟ್ಟೀಕೆರೆ ಹಾಗೂ ಸುತ್ತಮುತ್ತಲಿನ ಗ್ರಾಮವನ್ನು ಪಡೆದು ಅದರಲ್ಲಿ ಬರುವ ಅದಾಯದಲ್ಲಿ 10 ವ್ರಿತ್ತಿಳನ್ನು ಯೋಗಮಾಧವ ದೇವಾಲಯದ ನಿರ್ವಹಣೆಗೆ ನೀಡಿದನು. ಈ ದೇವಾಲಯವು ವಾಸ್ತು ವಿನ್ಯಾಸ ಹಾಗೂ ರಚನೆಯಲ್ಲಿ ಬಹುತೇಕವಾಗಿ ಚಿಕ್ಕಮಗಳೂರು ಜಿಲ್ಲೆಯ ಬೆಳವಾಡಿಯ ವೀರನಾರಾಯಣ, ಮರಳಿಯ ಕೇಶವ ದೇವಾಲಯ ಹಾಗೂ ಮಂಡ್ಯ ಜಿಲ್ಲೆಯ ಪಾಂಡವಪುರ ತಾಲ್ಲೂಕಿನಲ್ಲಿರುವ ಸುಂಕತೊಣ್ಣೂರು ಗ್ರಾಮದಲ್ಲಿರುವ ಚೆನ್ನಕೇಶವ ದೇವಾಲಯ, ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೂಕಿನ ಹೆಡತಲೆ ಗ್ರಾಮದಲ್ಲಿರುವ ಲಕ್ಷ್ಮೀನಾರಾಯಣ ದೇವಾಲಯ ಮತ್ತು ಮಂಡ್ಯ ಜಿಲ್ಲೆಯ ಸಿಂಧಘಟ್ಟದ ಕೇಶವ ದೇವಾಲಯಗಳನ್ನು ಹೋಲುತ್ತದೆ.

ಹೊಯ್ಸಳ ವಾಸ್ತುವಾದ ಯೋಗಮಾಧವ ದೇವಾಲಯದ ವಾಸ್ತು ರಚನೆಯನ್ನು ನೋಡಿದಾಗ ಈ ದೇವಾಲಯ ಶೆಟ್ಟಿಕೆರೆ ಮತ್ತು ಸುತ್ತಮುತ್ತಲ ಗ್ರಾಮಗಳ ಪರಿಸರದಲ್ಲಿಯೇ ಅತಿದೊಡ್ಡ ದೇವಾಲಯವಾಗಿದ್ದು, ಹೊಯ್ಸಳರ ಆಳ್ವಿಕೆಯ ಅವಧಿಯಲ್ಲಿ ಪೂರ್ವಾಭಿಮುಖವಾಗಿ ಸೋಪುಗಲ್ಲಿನಿಂದ ನಿರ್ಮಿಸಲಾಗಿದೆ.

ಈ ಯೋಗಮಾಧವ ದೇವಾಲಯವು ತ್ರಿಕೂಟ ದೇವಾಲಯವಾಗಿದೆ. ಈ ದೇವಾಲಯವು 3 ಗರ್ಭಗೃಹಗಳನ್ನು ಹೊಂದಿದ್ದು, ಅಂತರಾಳ, ನವರಂಗ, ಮುಖಮಂಟಪ, ದ್ವಾರಮಂಟಗಳನ್ನು ಒಳಗೊಂಡಿದೆ.

**ಪಶ್ಚಿಮ ಗರ್ಭಗೃಹ:** ಗರ್ಭಗೃಹದ ಒಳಭಾಗದ ಸುತ್ತಳತೆಯು 10x10 ಅಡಿ ಉದ್ದಗಲವನ್ನು ಹೊಂದಿದ್ದು, ಮಧ್ಯಭಾಗದಲ್ಲಿ 1.5 ಅಡಿ ಎತ್ತರದ ನಕ್ಷಾತ್ರಾಕಾರದ ಗರುಡ ಪೀಠದ ಮೇಲೆ 5 ಅಡಿ ಎತ್ತರದ ಯೋಗ ಮಾಧವ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ಈ ದೇವಮೂರ್ತಿಯು ಯೋಗ ಭಂಗಿಯಲ್ಲಿ ಕುಳಿತಿದ್ದು, ಚತುರ್ಭುಜವನ್ನು ಹೊಂದಿದ್ದಾನೆ. ಕೈಗಳಲ್ಲಿ ಶಂಖ, ಬೆತ್ತ ಮತ್ತು ಇನ್ನೊಳಿದ 2 ಕೈಗಳು ಯೋಗ ಮುದ್ರೆಯಲ್ಲಿವೆ. ಈ ದೇವಮೂರ್ತಿಯ ಶಿರದಲ್ಲಿ ಗೋಪುರ ಮಾದರಿಯ ಕರಂಡಮುಕುಟ ಕಿರೀಟಮುದ್ರೆ ಹಾಗೂ ಕಂಠೀಹಾರ ಸುಂದರವಾದ ಸೂಕ್ಷ್ಮಕೆತ್ತನೆಯುಳ್ಳ ತೋಳಬಂಧಿ ಹಾಗೂ ಕೈ ಕಡಗ, ಕಾಲ್ಗಡಗ, ಧರಿಸಿ ಕುಳಿತ್ತಿದ್ದಾನೆ. ಪ್ರಭಾವಳಿಯು ಕಮಾನಿನಾಕೃತಿಯಲ್ಲಿದ್ದು, ಸುಂದರವಾದ ಸೂಕ್ಷ್ಮ ಅಲಂಕರಣೆಯಿಂದ ಕೂಡಿದೆ. ಈ ಪ್ರಭಾವಳಿಯಲ್ಲಿ ವಿಷ್ಣುವಿನ ದಶಾವತರವಾದ ಮತ್ಸ್ಯ, ಕೂರ್ಮ, ವರಾಹ, ನರಸಿಂಹ, ವಾಮನ, ಪರಶುರಾಮ, ರಾಮ, ಬಲರಾಮ, ಕೃಷ್ಣ, ಕಲ್ಕಿ ಶಿಲ್ಪಗಳನ್ನು ಅತ್ಯಂತ ಸುಂದರವಾಗಿ ಕೆತ್ತನೆ ಮಾಡಲಾಗಿದೆ, ಮಧ್ಯಭಾಗದಲ್ಲಿ ಕೀರ್ತಿಮುಖ ಕೆತ್ತನೆ ಇದೆ. ಗರ್ಭಗೃಹದ 4 ಮೂಲೆಗಳಲ್ಲಿ ಗೋಡೆಗೆ ಹೊಂದಿಕೊಂಡಂತೆ ಹೊಯ್ಸಳ ಶೈಲಿಯ 8 ಅಡಿ ಎತ್ತರದ ವರ್ಧಮಾನ ಕಂಬಗಳನ್ನು ಕಾಣಬಹುದು. ಗರ್ಭಗೃಹದ ಭಿತ್ತಿಯ ಕಂಬಗಳು ನಿರಾಲಂಕೃತವನ್ನು ಕೂಡಿವೆ ಹಾಗೂ ಪೂಜಾಪರಿಕರಗಳನ್ನು ಇಟ್ಟುಕೊಳ್ಳಲು ಒಂದು ಮುಂಚಾಚಿರುವ ವೇದಿಕೆ ಇದೆ.

ಗರ್ಭಗೃಹದ ಮೇಲ್ಛಾವಣೆಯಲ್ಲಿ ಸುಂದರವಾದ 3 ಹಂತಗಳಿಂದ ಕೂಡಿದ ನಕ್ಷತ್ರಾಕಾರದ ನಾಭಿಬಂಧ ಭುವನೇಶ್ವರಿಯ ಅಲಂಕರಣೆ ಇದೆ. ಈ ಭುವನೇಶ್ವರಿಯು ಮೊದಲ ಮತ್ತು ಎರಡನೇ ಹಂತಗಳಲ್ಲಿ ಅರಳಿದ ಪದ್ಮ ಪುಷ್ಪಗಳ ಕೆತ್ತನೆ ಮಾಡಲಾಗಿದೆ. ಮೂರನೇ ಹಂತದಲ್ಲಿ ವೃತ್ತಾಕಾರದಲ್ಲಿ ಪದ್ಮದ ದಳಗಳು ಮಧ್ಯಭಾಗದಲ್ಲಿ ಕಮಲದ ಮೊಗ್ಗನ್ನು ಕೆತ್ತನೆ ಮಾಡಲಾಗಿದೆ.

ಗರ್ಭಗೃಹದ ದ್ವಾರಬಂಧವು 3x5.5 ಅಗಲ ಮತ್ತು ಎತ್ತರದ ಸುತ್ತಳತೆಯನ್ನು ಹೊಂದಿದ್ದು, ದ್ವಾರಶಾಖೆಯಲ್ಲಿ ಚಿಕ್ಕದಾದ ಅಲಂಕೃತವಾದ ವರ್ಧಮಾನ ಅರೆಗಂಬಗಳನ್ನು ಕಾಣಬಹುದು. ದ್ವಾರದ ಮೇಲಿನ ಲಾಲಾಟ ಬಿಂಬದಲ್ಲಿ ಯಾವುದೇ ಉಬ್ಬು ಕೆತ್ತನೆಗಳನ್ನು ಮಾಡದೇ ಹಾಗೇ ಬಿಡಲಾಗಿದೆ. ಲಲಾಟಬಿಂಬಿದ ಇಕ್ಕೆಲಗಳಲ್ಲಿ ಕಮಲದ ಮೊಗ್ಗಿನ ರೀತಿಯಲ್ಲಿ ಕೆತ್ತನೆ ಮಾಡಲ್ಪಟ್ಟಿರುವ ಬುಗುಟುಗಳ ರಚನೆ ಕಾಣಬಹುದು. ಕಪೋತ, ತೋರಣ, ಹಾರಗಳ ಭಾಗದಲ್ಲಿ ದಂತಪಂಕ್ತಿಗಳ ಸಾಲು ರಚನೆಯನ್ನು ಕಾಣಬಹುದು. ತೋರಣ ಭಾಗದಲ್ಲಿ ಸೂಕ್ಷ್ಮವಾದ ಅತ್ಯಂತ ಮನೋಹರದಿಂದ ಕೂಡಿರುವ ಸ್ತಂಭ ಪಂಜರಗಳು, ಪದ್ಮದಳಗಳ ಕೆತ್ತನೆಯನ್ನು ಕಾಣಬಹುದು.

ದ್ವಾರದ ಕೆಳಭಾಗದ ಇಕ್ಕೆಲಗಳಲ್ಲಿ ದ್ವಾರಪಾಲಕರ ಶಿಲ್ಪಗಳನ್ನು ಕೆತ್ತನೆ ಮಾಡದೇ ಖಾಲಿ ಬಿಡಲಾಗಿದೆ. ಆ ಸ್ಥಳಗಳಲ್ಲಿ ಅಳ್ವಾರರ ಬಿಡಿ ಶಿಲ್ಪಗಳನ್ನು ಬೇರೆಡೆಯಿಂದ ತಂದು ಇಡಲಾಗಿದೆ. ಈ ಆಳ್ವಾರರನ್ನು ಸಂಪ್ರದಾಯಗಳಲ್ಲಿ ನಾರಾಯಣನ ವಿವಿಧ ಆಯುಧಗಳಿಂದ ಜನಿಸಿದವರು ಹಾಗೂ ಅವರು ನಿತ್ಯಸೂರಿಗಳು ಅಂದರೆ ವೈಕುಂಠದಲ್ಲಿ ಸರ್ವಧಾ ಭಗವಂತನೊಡನೆ ವಾಸಿಸುವವರು ಎಂದು ಕರೆಯಲಾಗಿದ್ದು, ಈ ಹಿನ್ನೆಲೆಯಲ್ಲಿ ಸಾಮಾನ್ಯವಾಗಿ ಹನ್ನೆರಡು ಆಳ್ವಾರರುಗಳನ್ನು ಪ್ರತಿಷ್ಠಾಪಿಸಲಾಗುವುದು. ಈ ಎರಡರಲ್ಲಿ ಇಬ್ಬರು ಆಳ್ವಾರರನ್ನು ಬೇರೊಂದು ಕಡೆಯಿಂದ ತಂದು ಪ್ರತಿಷ್ಠಾಪಿಸಲಾಗಿದೆ ಎಂದು ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ಗುರುತಿಸಲಾಗಿದೆ.

**ಅಂತರಾಳ:** ಅಂತರಾಳವು ಯಾವುದೇ ಅಲಂಕರಣಗಳಿಲ್ಲದೆ ಸಾಧಾರಣವಾಗಿದ್ದು, ಗರ್ಭಗೃಹಕ್ಕಿಂತ ಸ್ವಲ್ಪ ಚಿಕ್ಕದಾಗಿ 8x8 ಅಡಿ ಉದ್ದಗಲ ಹೊಂದಿದ್ದು, ಭಿತ್ತಿಯಲ್ಲಿ ಯಾವುದೇ ಉಬ್ಬುಶಿಲ್ಪಗಳು ಇಲ್ಲದೇ ಸರಳವಾಗಿದೆ. ಮೇಲ್ಛಾವಣಿಯಲ್ಲಿ ಮೂರು ಹಂತದಿಂದ ಕೂಡಿದ ನಾಭಿಚಂದ ಭುವನೇಶ್ವರಿಯನ್ನು ಕಾಣಬಹುದು. ಮೊದಲನೇ ಮತ್ತು ಎರಡನೇ ಹಂತದಲ್ಲಿ ಅರಳಿದ ಕನುಲದ ಕೆತ್ತನೆಗಳು, ಮೂರನೇ ಹಂತದಲ್ಲಿ ವೃತ್ತಾಕಾರದಲ್ಲಿರುವಂತೆ ಕಮಲದ ದಳಗಳನ್ನು ಮತ್ತು ಮಧ್ಯದಲ್ಲಿ ಕಮಲದ ಮೊಗ್ಗನ್ನು ಕೆತ್ತನೆ ಮಾಡಲಾಗಿದೆ.

ಅಂತರಾಳದ ದ್ವಾರಬಂಧವು 3x5.5 ಅಡಿ ಅಗಲ ಮತ್ತು ಎತ್ತರವನ್ನು ಹೊಂದಿದ್ದು, ದ್ವಾರಶಾಖೆಯಲ್ಲಿ ವಜ್ರ ಲತಾಬಳ್ಳಿಗಳು, ಅಲಂಕಾರಿಕಯುತವಾದ ವರ್ಧಮಾನ ಅರೆಗಂಬ ಹಾಗೂ ಜಾಲಂದ್ರಗಳನ್ನು ಕಾಣಬಹುದು. ಲಲಾಟಬಂಬಿದಲ್ಲಿ ಯಾವುದೇ ಉಬ್ಬು ಕೆತ್ತನೆಗಳಿಲ್ಲ. ಲಲಾಟಬಿಂಬದ ಇಕ್ಕೆಲಗಳಲ್ಲಿ ಗುಬುಟುಗಳಿವೆ. ಕಪೋತದ ಭಾಗದಲ್ಲಿ ಮಣಿಕಟ್ಟುಗಳ ಕೆತ್ತನೆ ಹಾಗೂ ನಾಸಿ ಮತ್ತು ಮಹಾನಾಸಿ ಕೆತ್ತನೆಗಳನ್ನು ಕಾಣಬಹುದು. ಕಪೋತದ ಮೇಲಿನ ಭಾಗವು ಸರಳವಾಗಿದೆ. ದ್ವಾರದ ಇಕ್ಕೆಲಗಳಲ್ಲಿ ತ್ರಿಭಂಗಿಯಲ್ಲಿ ನಿಂತಿರುವ ವೈಷ್ಣವ ದ್ವಾರಪಾಲಕರುಗಳು, ಜಯ–ವಿಜಯರ ಶಿಲ್ಪಗಳನ್ನು ಕಾಣಬಹುದು. ಈ ದ್ವಾರಪಾಲಕರುಗಳು ಚತುರ್ಭುಜವನ್ನು ಹೊಂದಿದ್ದು, ಕೈಗಳಲ್ಲಿ ಶಂಖ, ಚಕ್ರ, ಗಧಾ, ಪದ್ಮವನ್ನು ಹಿಡಿದು ನಿಂತಿದ್ದಾರೆ. ಮೈಮೇಲೆ ವಿವಿಧ ಬಗೆಯ ಸೂಕ್ಷ್ಮ ಕೆತ್ತನೆಯಿಂದ ಕೂಡಿದ ವಸ್ತ್ರಾಭರಣಗಳನ್ನು ಶಿಲ್ಪಿಯು ಅತ್ಯಂತ ನಯನಮನೋಹರವಾಗಿ ಕಾಣುವಂತೆ ಚಿತ್ರಿಸಿದ್ದಾನೆ. ಈ ದ್ವಾರಪಾಲಕರ ಇಕ್ಕೆಲಗಳಲ್ಲಿ ಸ್ತ್ರೀ ಪರಿಚಾರಿಕೆಯರನ್ನು ಕಾಣಬಹುದು. ಈ ಪರಿಚಾರಿಕೆಯರು ಎರಡು ಚಾಮರ ಮತ್ತು ಮತ್ತೊಂದು ಕೈಯಲ್ಲಿ ದೀವಿಗೆಯನ್ನು ಹಿಡಿದು ನಿಂತಿದ್ದಾರೆ.

**ಉತ್ತರದ ಗರ್ಭಗೃಹ:** ಗರ್ಭಗೃಹವು 10x10 ಅಡಿ ಉದ್ದಗಲದ ಸುತ್ತಳತೆಯನ್ನು ಹೊಂದಿದ್ದು, ಗರ್ಭಗೃಹದ ಮಧ್ಯಭಾಗದ ಮೇಲೆ 1.5 ಅಡಿ ಎತ್ತರದ ಗರುಡ ಪೀಠದ (ಪೀಠದಲ್ಲಿರುವ ಗರುಡನು ಅಂಜಲಿ ಹಸ್ತನಾಗಿರುವ ಮೂರ್ತಿಯನ್ನು ಬಹಳ ಸುಂದರವಾಗಿ ಕೆತ್ತನೆ ಮಾಡಿದ್ದು ಗರುಡ ರೆಕ್ಕೆಗಳ ಪತ್ತಿಭಾಗವೂ ಸಹ ಸ್ಪಷ್ಟವಾಗಿ ಕಾಣಿಸುತ್ತದೆ.) ಮೇಲೆ 4 ಅಡಿ ಎತ್ತರದ ಲಕ್ಷ್ಮಿನಾರಾಯಣ ಶಿಲ್ಪವನ್ನು ಪ್ರತಿಷ್ಠಾಪನೆ ಮಾಡಲಾಗಿದೆ. ಈ ದೇವಮೂರ್ತಿಯು ಚತುರ್ಭುಜವನ್ನು ಹೊಂದಿದ್ದು, ಶಂಖ, ಚಕ್ರಾ, ಗಧಾ, ಪದ್ಮವನ್ನು ಹಿಡಿದು ಕುಳತಿದ್ದಾನೆ. ಈ ದೇವಾಮೂರ್ತಿ ತನ್ನ ಎಡೆತೊಡೆಯ ಮೇಲೆ ಲಕ್ಷ್ಮಿಯನ್ನು ಕೂರಿಸಿಕೊಂಡದ್ದಾನೆ. ಈ ದೇವಮೂರ್ತಿಯ ಹಿಂಭಾಗದಲ್ಲಿರುವ ಪ್ರಭಾವಳಿಯಲ್ಲಿ ವಿಷ್ಣುವಿನ ದಶಾವತಾರವಾದ ಮತ್ಸ್ಯ, ಕೂರ್ಮ, ವರಾಹ, ನರಸಿಂಹ, ವಾಮನ, ಪರಶುರಾಮ, ರಾಮ, ಬಲರಾಮ, ಕೃಷ್ಣ–ಕಲ್ಕಿ ಶಿಲ್ಪಗಳನ್ನು ಅತ್ಯಂತ ಸೂಕ್ಷ್ಮವಾಗಿ ಕೆತ್ತನೆ ಮಾಡಲಾಗಿದೆ ಮತ್ತು ಮಧ್ಯದಲ್ಲಿ ಕೀರ್ತಿಮುಖವನ್ನು ಒಳಗೊಂಡಂತೆ ದೇವಮೂರ್ತಿಯನ್ನು ಬಹಳ ಸೊಗಸಾಗಿ ಚಿತ್ರಿಸಿದ್ದಾರೆ. ಗರ್ಭಗೃಹದ ಭಿತ್ತಿಯಲ್ಲಿ ಯಾವುದೇ ಶಿಲ್ಪಗಳ ಕೆತ್ತನೆ ಕಂಡುಬರದೇ ನಿರಾಲಂಕೃತವಾಗಿದೆ ಮತ್ತು ಪೂಜಾ ಪರಿಕರಗಳನ್ನು ಇಟ್ಟುಕೊಳ್ಳಲು ಒಂದು ಮುಂಚಾಚಿರುವ ವೇದಿಕೆಯನ್ನು ನಿರ್ಮಿಸಿಲಾಗಿದೆ. ಗೋಡೆಗಳಗೆ ಹೊಂದಿಕೊಂಡಂತೆ 4 ಮೂಲೆಗಳಲ್ಲಿ ಹೊಯ್ಸಳ ಶೈಲಿಯ ವರ್ಧಮಾನ ಸ್ತಂಭಗಳನ್ನು ಕಾಣಬಹುದು. ಮೇಲ್ಭಾಗದಲ್ಲಿ 3 ಹಂತದಿಂದ ಕೊಡಿದ ನಾಭಿಬಂಧ ಭುವನೇಶ್ವರಿಯು ಸುಂದರವಾದ ಅಲಂಕರಣೆಯಿಂದ ಕೂಡಿದೆ. ಮೊದಲನೇ ಮತ್ತು ಎರಡನೇ ಹಂತದಲ್ಲಿ ಅರಳಿದ ಪದ್ಮ ಪುಷ್ಪಗಳ ಕೆತ್ತನೆ ಮಾಡಲಾಗಿದೆ. ಮೂರನೇ ಹಂತದಲ್ಲಿ ವೃತ್ತಾಕಾರದಲ್ಲಿ ಪದ್ಮದ ದಳಗಳು, ಮಧ್ಯದಲ್ಲಿ ಕಮಲದ ಮೊಗ್ಗನ್ನು ಬಹುಸುಂದರವಾಗಿ ಕೆತ್ತನೆ ಮಾಡಲಾಗಿದೆ.

ಗರ್ಭಗೃಹದ ದ್ವಾರಬಂಧವು 3x5.5 ಅಡಿ ಅಗಲ ಮತ್ತು ಎತ್ತರವನ್ನು ಹೊಂದಿದೆ. ದ್ವಾರಶಾಖೆಯಲ್ಲಿ ಚಿಕ್ಕದಾದ ಅಲಂಕಾರಿಕವಾದ ವರ್ಧಮಾನ ಸ್ತಂಭಗಳಲ್ಲಿ ದ್ವಾರದ ಮೇಲಿನ ಲಲಾಟ ಬಿಂಬದಲ್ಲಿ ಯಾವುದೇ ಉಬ್ಬು ಶಿಲ್ಪಗಳ ಕೆತ್ತನೆಗಳಲ್ಲಿ. ಲಲಾಟಬಿಂಬದ ಇಕ್ಕೆಲಗಳಲ್ಲಿ ಬುಗುಟುಗಳವೆ. ತೊರಣದ ಭಾಗದಲ್ಲಿ ಮಣಿಸರಗಳ ಕೆತ್ತನೆ ಹಾಗೂ ಕಟ್ಟಡದ ಭಾಗದಲ್ಲಿ ನಾಸಿ ಮತ್ತು ಮಹಾನಾಸಿಗಳ ಕೆತ್ತನೆಯನ್ನು ಕಾಣಬಹುದು. ದ್ವಾರದ ಇಕ್ಕೆಲಗಳಲ್ಲಿ ತ್ರಿಭಂಗಿಯಲ್ಲಿ ನಿಂತಿರುವ ದ್ವಾರಪಾಲಕರುಗಳಾದ ಜಯ–ವಿಜಯರ ಶಿಲ್ಪಗಳನ್ನು ಕಾಣಬಹುದು. ಈ ದ್ವಾರಪಾಲಕರು ಚುತುರ್ಭುಜವನ್ನು ಹೊಂದಿದ್ದು, ಕೈಗಳಲ್ಲಿ ಶಂಖ, ಚಕ್ರ, ಗದಾ, ಪದ್ಮವನ್ನು ಹಿಡೆದು ನಿಂತಿದ್ದಾರೆ. ಮೈಮೇಲೆ ವಿವಿಧ ಬಗೆಯ ಸೂಕ್ಷ್ಮ ಕೆತ್ತನೆಯಿಂದ ಕೂಡಿದ ವಸ್ತ್ರಾಭರಣಗಳನ್ನು ಕಾಣಬಹುದು. ಈ ದ್ವಾರಪಾಲಕರ ಇಕ್ಕೆಲಗಳಲ್ಲಿ ಸ್ತ್ರೀ ಪರಿಚಾರಿಕೆಯರನ್ನು ಕಾಣಬಹುದು. ಈ ಪರಿಚಾರಿಕೆಯರು ಚಾಮರ ಮತ್ತು ದೀವಿಗೆಯನ್ನು ಹಿಡಿದು ನಿಂತಿದ್ದಾರೆ.

**ದಕ್ಷಿಣ ಗರ್ಭಗೃಹ:** ದಕ್ಷಿಣ ಗರ್ಭಗೃಹವು 10x10 ಅಡಿ ಉದ್ದಗಲದ ಸುತ್ತಳತೆಯನ್ನು ಹೊಂದಿದ್ದು, ದಕ್ಷಿಣ ಗರ್ಭಗೃಹದ ಮಧ್ಯಭಾಗದಲ್ಲಿ 1.5 ಅಡಿ ಎತ್ತರದ ಗರುಡಪೀಠದ ಮೇಲೆ 5 ಅಡಿ ಎತ್ತರದ ವೇಣುಗೋಪಾಲಸ್ವಾಮಿಯ ಮೂರ್ತಿಯು ನಯನಮೋಹರವಾಗಿದ್ದು, ಹೊಯ್ಸಳರ ಕಲಾಶ್ರೇಷ್ಠತೆಯ ಪ್ರತಿಬಿಂಬಿವಾಗಿದೆ. ಪೀಠದಲ್ಲಿ ಗರುಡನನ್ನು ಒಂದು ಸಣ್ಣ ಪೀಠದ ಒಳಗಡೆ ಕೆತ್ತನೆ ಮಾಡಿದ್ದು, ಅವನ ರೆಕ್ಕೆಗಳೂ ಸಹ ಸ್ಪಷ್ಟವಾಗಿ ಕಾಣಿಸುತ್ತವೆ. ಶ್ರೀ ವೈಷ್ಣವ ಸಂಪ್ರದಾಯದಲ್ಲಿ ಗರುಡನನ್ನು ಪೆರಿಯ ತಿರುಪಡಿ ಅಂದರೆ ದೇವರದೊಡ್ಡಪಾದ ಅಥವಾ ಬಲಗಾಲು ಎಂತಲೂ ಕರೆಯುವುದುಂಟು. ವೇಣುಗೋಪಾಲನು ತಾಳಮರದ ಕೆಳಗೆ ನಿಂತು ಕೊಳಲನ್ನು ನುಡಿಸುತ್ತ ತ್ರಿಭಂಗಿಯಲ್ಲಿ ನಿಂತಿದ್ದಾನೆ. ತನ್ನ ಎಡಗಾಲನ್ನು ಸ್ಥಿರವಾಗಿ ಊರಿಕೊಂಡು, ಬಲಗಾಲನ್ನು ಮಡಚಿಕೊಂಡು ತನ್ನ ಬಲಗಾಲಿನ ಹೆಬ್ಬೆರಳನ್ನು  ಭೂಮಿಗೆ ಅಧಿಸಿಕೊಂಡಂತೆ ಕೆತ್ತಲಾಗಿದೆ. ಇದನ್ನು ಸ್ವಸ್ತಿಕ ಪದ್ಮನಾಭ ಎಂದು ಕರೆಯಲಾಗುತ್ತಿದೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಕೃಷ್ಣನನ್ನು ಅವನ ಶತನಾಮಾವಳಿಯ ಸ್ತೋತ್ರದಲ್ಲಿ ತ್ರಿಭಂಗಿನೇ ನಮಃ ಎಂದು ಕರೆಯಲಾಗುತ್ತದೆ. ಅದರಂತೆ ಗೋಪಾಲನು ಮೂರು ಭಾಗಗಳಲ್ಲಿ ಶಿಖರವನ್ನು ಬಗ್ಗಿಸಿಕೊಂಡು ನಿಂತಿರುವ ಭಂಗಿಯ ಗೋಪಾಲನನ್ನು ಇಲ್ಲಿ ಕಾಣಬಹುದು. ತನ್ನ ಎರಡು ಕೈಗಳಲ್ಲೂ ಕೊಳಲನ್ನು ನುಡಿಸುತ್ತಿರುವ ಗೋಪಾಲನ ಕೈಗಳಿರುವ ತೋಳುಬಂದಿ ಹಾಗೂ ಕೈಕಡಗ, ಕಾಲಲ್ಲಿ ಕಾಲ್ಗಡಗ, ನಂದಿಬೆಟ್ಟ, ಯಜ್ಞೋಪವಿತ, ಕೊರಳಲ್ಲಿ ಕಂಠಿಹಾರ, ಕಿವಿಯಲ್ಲಿ ಕಿವಿಯುಂಗುರ, ತಲೆಯಲ್ಲಿ ಸೂಕ್ಷ್ಮ ಅಲಂಕರಣೆಗಳಿಂದ ಕೂಡಿರುವ ಕಿರೀಟವನ್ನು ಧರಿಸಿದ್ದು, ಈ ದೇವಮೂರ್ತಿಯ ಕೆಳಭಾಗದ ಇಕ್ಕೆಲಗಳಲ್ಲಿ ಶ್ರೀದೇವಿ ಮತ್ತು ಭೂದೇವಿಯವರ ಶಿಲ್ಪಿಗಳನ್ನು ಕಾಣಬಹುದು. ಇವರುಗಳು ಸಹ ಸರ್ವಾಲಂಕಾರ ಭೂಷಿತೆಯರಾಗಿ ಕಾಣಬಹುದು.

ಶಿಲ್ಪದ ಪ್ರಭಾವಳಿಯಲ್ಲಿ ಗೋಪಾಲನ ಕೊಳಲಿನ ನಾದಕ್ಕೆ ಮೈಮರೆತು ನಿಂತಿರುವ ಹಸುಗಳ ಹಿಂಡು, ಹಸುಗಳ ಹಿಂದಿನ ಮೇಲ್ಭಾಗದಲ್ಲಿ ನಾಗರಾಜ, ವಸ್ತ್ರ ಜಾರುತ್ತಿರುವ ಗೋಪಿಕಾ ಸ್ತ್ರೀಯರು, ಮರಗಳನ್ನು ಹತ್ತುತ್ತಿರುವ ಮಂಗಗಳು, ಹಸುವಿನ ಕೆಚ್ಚಲಿನಿಂದ ಹಾಲನ್ನು ಕುಡಿಯುತ್ತಿರುವ ಹುಲಿಮರಿ, ತಾಳೆಮರದ ಎಲೆಗಳನ್ನು ಹಿಡಿದು ನಿಂತಿರುವ ಖುಷಿಮುನಿಗಳು, ಅವರ ಮೇಲ್ಭಾಗದಲ್ಲಿ ಧ್ಯಾನಸಕ್ತಿನಾಗಿರುವ ಮುನಿಯ ಎದುರಿಗೆ ಕೈಮುಗಿದು ನಿಂತಿರುವ ರಾಜರಾಣಿಯರ ಕೆತ್ತನೆಗಳು ನಯನ ಮನೋಹರವಾಗಿದೆ. ಗೋಪಾಲನ ಕೊಳಲಿನ ತುದಿಯಲ್ಲಿ ಅಲಂಕಾರಯುತವಾದ ಗೊಂಚಲನ್ನು ಸಹ ಕೆತ್ತಲಾಗಿದ್ದು, ಹೊಯ್ಸಳರ ಕಾಲದ ಶ್ರೇಷ್ಠ ಕಲಾಕೃತಿ ಎಂಬುದನ್ನು ಸಾಬೀತುಪಡಿಸುತ್ತದೆ ಹಾಗೂ ಪ್ರಭಾವಳಿಯಲ್ಲಿ ವಿಷ್ಣುವಿನ ಆಯುಧಗಳಾದ ಶಂಖ, ಚಕ್ರ, ಗದಾ, ಪದ್ಮದ ಕೆತ್ತನೆ ಕಾಣಬಹುದು. ಅದೇ ರೀತಿ ವಿಷ್ಣುವಿನ ದಶಾವತಾರಗಳಾದ ಮತ್ಸ್ಯ, ಕೂರ್ಮ, ವರಾಹ, ನರಸಿಂಹ, ವಾಮನ, ಪರಶುರಾಮ, ರಾಮ, ಬಲರಾಮ, ಕೃಷ್ಣ, ಕಲ್ಕಿ ಶಿಲ್ಪಗಳನ್ನು ಸೂಕ್ಷ್ಮವಾಗಿ ಕೆತ್ತನೆ ಮಾಡಲಾಗಿದೆ ಹಾಗೂ ಇದರಲ್ಲಿ ಕೀರ್ತಿಮುಖವನ್ನು ಸಹ ಕಾಣಲಾಗುತ್ತದೆ. ಗರ್ಭಗೃಹದ ಭಿತ್ತಿಯಲ್ಲಿ ಯಾವುದೇ ಉಬ್ಬು ಶಿಲ್ಪಗಳ ಕೆತ್ತನೆ ಕಂಡುಬರುವುದಿಲ್ಲ. ಭಿತ್ತಿಯು ನಿರಾಲಂಕೃತವಾಗಿದೆ ಹಾಗೂ ಪೂಜಾ ಪರಿಕರಗಳನ್ನು ಇಟ್ಟುಕೊಳ್ಳಲು ಒಂದು ಮುಂಚಾಚಿರುವ ವೇದಿಕೆಯನ್ನು ನಿರ್ಮಿಸಲಾಗಿದೆ.

ಗರ್ಭಗೃಹದ 4 ಮೂಲೆಗಳಲ್ಲಿ ಗೋಡೆಗೆ ಹೊಂದಿಕೊಂಡಂತೆ ಹೊಯ್ಸಳ ಶೈಲಿಯ ವರ್ಧಮಾನ ಸ್ತಂಭಗಳನ್ನು ಕಾಣಬಹುದು. ಮೇಲ್ಭಾಗದಲ್ಲಿ 3 ಹಂತದಿಂದ ಕೂಡಿದ ನಾಭಿಚಂದ ಭುವನೇಶ್ವರಿಯು ಸುಂದರವಾದ ಅಲಂಕರಣೆಯಿಂದ ಕೂಡಿದೆ. ಮೊದಲನೇ ಮತ್ತು ಎರಡನೇ ಹಂತಗಳಲ್ಲಿ ಅರಳಿದ ಪದ್ಮ-ಪುಷ್ಪಗಳ ಕೆತ್ತನೆ ಮಾಡಲಾಗಿದೆ. ಮೂರನೇ ಹಂತದಲ್ಲಿ ವೃತ್ತಾಕಾರದಲ್ಲಿ ಪದ್ಮ ದಳಗಳ ಮಧ್ಯದಲ್ಲಿ ಕಮಲದ ಮೊಗ್ಗನ್ನು ಬಹುಸುಂದರವಾಗಿ ಕೆತ್ತನೆ ಮಾಡಲಾಗಿದೆ.

ಗರ್ಭಗೃಹದ ದ್ವಾರಬಂದವು 3x5.5 ಅಡಿ ಅಗಲ ಮತ್ತು ಎತ್ತರವನ್ನು ಹೊಂದಿದೆ. ದ್ವಾರಶಾಖೆಯಲ್ಲಿ ಚಿಕ್ಕದಾದ ಅಲಂಕಾರಿಕವಾದ ಅರೆ ವರ್ಧಮಾನ ಸ್ತಂಭಗಳನ್ನು ಕಾಣಬಹುದು. ಲಲಾಟಬಿಂಬದಲ್ಲಿ ಯಾವುದೇ ಉಬ್ಬು ಶಿಲ್ಪಗಳ ಕೆತ್ತನಯಿಲ್ಲ. ಲಾಲಾಟಬಿಂಬಿದ ಇಕ್ಕೆಲಗಳಲ್ಲಿ ಬುಗುಟಗಳಿವೆ. ತೋರಣದ ಭಾಗದಲ್ಲಿ ಮಣಿಸರಗಳ ಕೆತ್ತನೆ ಹಾಗೂ ಕಪೋತದ ಭಾಗದಲ್ಲಿ ನಾಸಿ, ಮಹಾನಾಸಿಗಳ ಕೆತ್ತನೆಯನ್ನು ಕಾಣಬಹದು. ದ್ವಾರದ ಇಕ್ಕೆಲಗಳಲ್ಲಿ ತ್ರಿಭಂಗಿಯಲ್ಲಿ ನಿಂತಿರುವ ದ್ವಾರಪಾಲಕರುಗಳಾದ ಜಯ-ವಿಜಯರ ಶಿಲ್ಪಗಳನ್ನು ಕಾಣಬಹುದು. ಈ ದ್ವಾರಪಾಲಕರು ಚತುರ್ಭುಜವನ್ನು ಹೊಂದಿದ್ದು, ಕೈಗಳಲ್ಲಿ ಶಂಖ, ಚಕ್ರ, ಗದಾ, ಪದ್ಮವನ್ನು ಹಿಡಿದು ನಿಂತಿದ್ದಾರೆ. ಮೈಮೇಲೆ ವಿವಿಧ ಬಗೆಯ ಸೂಕ್ಷ್ಮ ಕೆತ್ತನೆಯಿಂದ ಕೂಡಿದ ವಸ್ತ್ರಾಭರಣಗಳನ್ನು ಕಾಣಬಹುದು. ಈ ದ್ವಾರಪಾಲಕರ ಇಕ್ಕೆಲಗಳಲ್ಲಿ ಸ್ತ್ರೀಪರಿಚಾರಿಕೆಯರನ್ನು ಕಾಣಬಹುದು. ಈ ಪರಿಚಾರಿಕೆಯರು ತಮ್ಮ ಎರಡು ಕೈಗಳಲ್ಲಿ ಚಾಮರ ಮತ್ತು ದೀವಿಗೆಯನ್ನು ಹಿಡಿದು ನಿಂತಿದ್ದಾರೆ.

**ನವರಂಗ:** ಈ ನವರಂಗವು 30x30 ಅಡಿ ಉದ್ದಗಲವನ್ನು ಹೊಂದಿದೆ. ಬಹಳ ಪ್ರಮುಖವಾದ ಮಧ್ಯಭಾಗದಲ್ಲಿ 1 ಅಡಿ ಎತ್ತರದ ವೇದಿಕೆಯ ಮೇಲೆ ಸುಮಾರು 6 ಅಡಿ ಎತ್ತರದ ಹೊಯ್ಸಳ ಶೈಲಿಯ 4 ಆಧಾರ ಸ್ತಂಭಗಳಿವೆ. ನವರಂಗದ ಸುತ್ತಲೂ 12 ವರ್ಧಮಾನ ಸ್ತಂಭಗಳಿದ್ದು, (ಈ ವರ್ಧಮಾನ ಕಂಬಗಳಿಗೆ ಅತ್ಯುತ್ತಮ ಉದಾಹರಣೆ ಎಂದರೆ ಬಾದಾಮಿಯ ಮೂರನೇ ಗುಹೆಯಲ್ಲಿರುವ ವರ್ಧಮಾನ ಸ್ತಂಭವಾಗಿದೆ).

ಮೇಲ್ಛಾವಣಿಯ ಒಂಬತ್ತು ಭಾಗಗಳಾಗಿ ವಿಭಾಗಿಸಲಾಗಿದೆ. ಈ ಸ್ತಂಭಗಳನ್ನು ಸಂಪೂರ್ಣವಾಗಿ ಹೊಯ್ಸಳ ಶೈಲಿಯಲ್ಲಿ ಸೋಪುಗಲ್ಲಿನಿಂದ ಮತ್ತು ತಿರುಗು ರಾಟೆಗಳ ಸಹಾಯದಿಂದ ಆಕರ್ಷಕವಾಗಿ ಕಡೆಯಲಾಗಿದೆ. ಈ ಕಂಬಗಳಲ್ಲಿ ಪೀಠ, ದಿಂಡು, ತಡಿ, ಕುಂಭ, ಹಲಗೆ ಮತ್ತು ಚಾಚು ಪೀಠಗಳಿವೆ. ದಿಂಡನ ಎಡಭಾಗ ಚೌಕಟ್ಟಾಗಿದೆ. ಉರುಳುದಿಂಡಿನ ಮಧ್ಯದಲ್ಲಿ ಗಂಟೆಯಾಕಾರದ ಕೆತ್ತನೆ ಇದೆ. ಗಾಲಿ, ದಿಂಡು, ಪಟ್ಟಿಕೆಗಳು ಸಾಧಾರಣವಾಗಿದೆ. ದಿಂಡಿನ ಮೇಲಿನ ಕುಂಭ ಚಕ್ರಾಕಾರವಾಗಿದೆ. ಮೇಲ್ಭಾಗದಲ್ಲಿ ಮುಷ್ಟಿಬಂಧ ಬೋದಿಗೆ ಇದೆ. ಈ ಬೋದಿಗೆಯಲ್ಲಿ ಅಲ್ಲಲ್ಲಿ ಸುಂದರ ಅಲಂಕರಣೆಗಳ ಕೆತ್ತನೆಯನ್ನು ಕಾಣಬಹುದು. ಈ ನಾಲ್ಕು ಕಂಬಗಳ ಮಧ್ಯೆ ಕೆಳಭಾಗದಲ್ಲಿರುವ ರಂಗಸ್ಥಳವು ಅರ್ಧ ಅಡಿ ಎತ್ತರವಾಗಿದೆ. ರಂಗಸ್ಥಳದ ನಾಲ್ಕು ಭಾಗಗಳ ಗೋಡೆಗಳು ಅದರಲ್ಲಿ ಸೇರಿಕೊಂಡಿರುವ ಗೋಡೆಗಂಬಗಳೆಲ್ಲವೂ ಬಣ್ಣದ ಗ್ರಾನೈಟ್ ಶಿಲೆಯ ಕೆತ್ತನೆಗಳಾಗಿವೆ. ಒಬ್ಬ ಸಾಮಾನ್ಯ ನೋಡುಗನು ಸಹ ಇದೊಂದು ಹೊಯ್ಸಳ ಶೈಲಿಯೆಂದು ಗುರುತಿಸಲು ಈ ನವರಂಗ ಸೋಪುಗಳಲ್ಲಿನ ಕಂಬುಗಳು ಬಹಳ ಪ್ರಮುಖವಾಗಿವೆ. ನವರಂಗದಲ್ಲಿ ಈ ಕಂಬಗಳಿಲ್ಲದೇ ಬೇರಾವ ಶಿಲ್ಪಗಳು ಕಂಡುಬರುವುದಿಲ್ಲ. ದ್ವಾರಪಾಲಕರಾಗಲಿ, ಕುಶಲಕಲೆಯಿಂದ ಕೂಡಿರುವ ಭುವನೇಶ್ವರಿಗಳಾಗಲಿ ಅಥವಾ ಮದನಿಕಾ ಶಿಲ್ಪಗಗಳಾಗಲಿ ಈ ದೇವಾಲಯದಲ್ಲಿ ಕಂಡುಬರುವುದಿಲ್ಲ.

ನವರಂಗದಲ್ಲಿ ಎಡಪಾರ್ಶ್ವದಲ್ಲಿ ಸಿಂಹಪೀಠದ ಮೇಲೆ ಇರುವ ಚಾಮರ ಅಥವಾ ಮಹೀಷಾಸುರ ಮರ್ದಿನಿಯ ಶಿಲ್ಪ ಹಾಗೂ ಬಲ ಭಾಗದಲ್ಲಿರುವ ಗಣೇಶ ಶಿಲ್ಪ, ಆಗ್ನೇಯ ಭಾಗದಲ್ಲಿರುವ ಕುದುರೆ ಪೀಠದ ಮೇಲೆ ಇರುವ ಶಕ್ತಿದೇವತೆ ಹಾಗೂ ದೇವಾಲಯದ ವಿವರಣೆ ಒದಗಿಸುವ ಶಾಸನವನ್ನು ಕಾಣಬಹುದು. ನವರಂಗದಲ್ಲಿ ನಾಲ್ಕು ಕಂಬಗಳಿಂದಾಗಿ ಮೇಲ್ಛಾವಣಿಯು ಒಂಬತ್ತು ಅಂಕಣದ್ದಾಗಿದೆ.

**ಮಧ್ಯದ ಭುವನೇಶ್ವರಿ:** ಈ ಭುವನೇಶ್ವರಿಯು 3 ಹಂತಗಳಿಂದ ಕೂಡಿದ್ದು, ಮೊದಲ ಮತ್ತು ಎರಡು ಹಂತಗಳಲ್ಲಿ ಅರಳಿದ ಪದ್ಮಗಳ ಕೆತ್ತನೆ, ಮೂರನೇ ಹಂತದಲ್ಲಿ ಪದ್ಮದ ದಳಗಳು ಅದರ ಮಧ್ಯಭಾಗದಲ್ಲಿ ಕಮಲದ ಮೊಗ್ಗನ್ನು ಕೆತ್ತನೆ ಮಾಡಲಾಗಿದೆ.

**ಈಶಾನ್ಯ ಭುವನೇಶ್ವರಿ:** ಈ ಭುವನೇಶ್ವರಿಯು ಸಹ 3 ಹಂತಗಳಿಂದ ಕೂಡಿದ್ದು, ಕೆತ್ತನೆ ಮಾಡಲಾಗಿದೆ

**ಉತ್ತರ ಭುವನೇಶ್ವರಿ:** ಈ ಭುವನೇಶ್ವರಿಯು 3 ಹಂತಗಳಿಂದ ಕೂಡಿದ್ದು, ಮೊದಲನೇ ಹಂತದಲ್ಲಿ ಯಾವುದೇ ಪದ್ಮಪುಷ್ಪದ ಕೆತ್ತನೆ ಇಲ್ಲ. ಎರಡನೇ ಹಂತದಲ್ಲಿ ಅರಳಿದ ಪದ್ಮಪುಷ್ಪದ ಕೆತ್ತನೆ ಹಾಗೂ ಮೂರನೇ ಹಂತದಲ್ಲಿ ವೃತ್ತಕಾರದ ಕಮಲದ ದಳಗಳು, ಮಧ್ಯಭಾಗದಲ್ಲಿ ನಕ್ಷಾತ್ರಕಾರದ ಮಂಡಲ, ಅದರ ಮಧ್ಯಭಾಗದಲ್ಲಿ ಕಮಲದ ಮೊಗ್ಗಿನ ಕೆತ್ತನೆಯನ್ನು ಕಾಣಬಹುದು.

**ಅಗ್ನೇಯ ಭುವನೇಶ್ವರಿ:** ಈ ಭುವನೇಶ್ವರಿಯು 3 ಹಂತಗಳಿಂದ ಕೂಡಿದ್ದು, ಮೊದಲ ಮತ್ತು ಎರಡನೇ ಹಂತದಲ್ಲಿ ಅರಳಿದ ಕಮಲದ ಕೆತ್ತನೆಯನ್ನು ಕಾಣಬಹುದು. ಮಧ್ಯಭಾಗದಲ್ಲಿ ವೃತ್ತಕಾರದ ಕಮಲದ ಮೊಗ್ಗಿನ ಕೆತ್ತನೆಯನ್ನು ಕಾಣಬಹುದು.

**ಪಶ್ಚಿಮ ಭುವನೇಶ್ವರಿ:** ಈ ಭುವನೇಶ್ವರಿಯ ಮೊದಲನೇ ಹಂತದಲ್ಲಿ ಯಾವುದೇ ಕೆತ್ತನೆಗಳು ಕಂಡುಬರುವುದಿಲ್ಲ. ಎರಡು ಮತ್ತು ಮೂರನೇ ಹಂತದಲ್ಲಿ ದೇವಾಲಯವನ್ನು ಜೀರ್ಣೋದ್ಧಾರ ಮಾಡುವ ಸಂದರ್ಭದಲ್ಲಿ ಮೂಲ ಕೆತ್ತನೆಯನ್ನು ಹೋಲವಂತಹ ಕಮಲದ ದಳಗಳ ಮೊಗ್ಗನ್ನು ನಿರ್ಮಿಸಿದ್ದಾರೆ.

**ನೈಋುತ್ಯ ಭುವನೇಶ್ವರಿ:** ಇದು ಮೂರು ಹಂತಗಳಿಂದ ಕೂಡಿದೆ. ಮೊದಲನೇ ಮತ್ತು ಎರಡನೇ ಹಂತದಲ್ಲಿ ಪದ್ಮದಳಗಳ ಕೆತ್ತನೆಯನ್ನು ಹೊಂದಿದ್ದು, ಮೂರನೇ ಹಂತದಲ್ಲಿ ಅರಳಿದ ವೃತ್ತಾಕಾರದ ಕಮಲದ ದಳಗಳನ್ನು ಮತ್ತು ಅದರ ಮಧ್ಯಭಾಗದಲ್ಲಿ ಕಮಲದ ಮೊಗ್ಗನ್ನು ಕೆತ್ತನೆ ಮಾಡಲಾಗಿದೆ.

**ದಕ್ಷಿಣ ಭುವನೇಶ್ವರಿ:** ಈ ಭುವನೇಶ್ವರಿಯು ಸಹ 3 ಹಂತಗಳಿಂದ ಕೂಡಿದ್ದು, ಮೊದಲನೇ ಹಂತದಲ್ಲಿ ಯಾವುದೇ ಕೆತ್ತನೆಗಳನ್ನು ಕಾಣಲಾಗುವುದಿಲ್ಲ. ಎರಡನೇ ಹಂತದಲ್ಲಿ ಅರಳಿದ ಪುಷ್ಪ ಮತ್ತು ಮೂರನೇ ಹಂತದಲ್ಲಿ ಪದ್ಮದಳಗಳ ಕತ್ತನೆ ಹಾಗೂ ಅದರ ಮಧ್ಯದಲ್ಲಿ ಕಮಲದ ಮೊಗ್ಗಿನ ಕೆತ್ತನೆಯನ್ನು ಕಾಣಬಹುದು.

**ವಾಯುವ್ಯ ಭುವನೇಶ್ವರಿ:** ಈ ಭುವನೇಶ್ವರಿಯು ಸಹ 3 ಹಂತಗಳಿಂದ ಕೂಡಿದ್ದು, ಮೊದಲನೇ ಮತ್ತು ಎರಡನೇ ಹಂತಗಳಲ್ಲಿ ಕಮಲದ ಕೆತ್ತನೆ ಹೊಂದಿದ್ದು, ಮೂರನೇ ಹಂತದಲ್ಲಿ ಕಮಲದ ದಳಗಳು ಅದರ ಮಧ್ಯಭಾಗದಲ್ಲಿ ವೃತ್ತಾಕಾರವಾದ ಕಮಲದ ಮೊಗ್ಗನ್ನು ಕೆತ್ತಲಾಗಿದೆ.

**ಪೂರ್ವ ಭುವನೇಶ್ವರಿ:** ಈ ಭುವನೇಶ್ವರಿಯು ಸಹ 3 ಹಂತಗಳಿಂದ ಕೂಡಿದ್ದು, ಮೊದಲನೇ ಹಂತದಲ್ಲಿ ಯಾವುದೇ ಕೆತ್ತನೆಗಳು ಕಂಡುಬರುವುದಿಲ್ಲ. 2ನೇ ಹಂತದಲ್ಲಿ ಅರಳಿದ ಕಮಲದ ಕೆತ್ತನೆಯನ್ನು ಹೊಂದಿದ್ದು, ಮೂರನೇ ಹಂತದಲ್ಲಿ ವೃತ್ತಾಕಾರದ ಕಮಲದ ದಳಗಳು, ಅದರ ಮಧ್ಯಭಾಗದಲ್ಲಿ ಕಮಲದ ಮೊಗ್ಗನ್ನು ಕೆತ್ತನೆ ಮಾಡಲಾಗಿದೆ.

ನವರಂಗದ ದ್ವಾರಬಂಧವು 3X5.5 ಅಡಿ ಅಗಲ ಮತ್ತು ಎತ್ತರವನ್ನು ಹೊಂದಿದೆ. ನವರಂಗದ ದ್ವಾರಬಂಧವು ಬಹಳ ಅಲಂಕಾರಯುತವಾಗಿದ್ದು ಆಕರ್ಷಣೀಯವಾಗಿದೆ. ದ್ವಾರಶಾಖೆಯ ಇಕ್ಕೆಲಗಳಲ್ಲಿ ಅಲಂಕಾರಿಕ ಅರೆವರ್ಧಮಾನ ಕಂಬಗಳನ್ನು ಕಾಣಬಹುದು. ಲಲಾಟಬಿಂಬದಲ್ಲಿ ಯಾವುದೇ ಉಬ್ಬುಶಿಲ್ಪಗಳ ಕೆತ್ತನೆಗಳಿಲ್ಲ. ಲಲಾಟಬಿಂಬಿದ ಇಕ್ಕೆಲಗಳಲ್ಲಿ ಗುಬುಟುಗಳನ್ನು ಕಾಣಬಹುದು. ಕಪೋತದ ಕೆಳಭಾಗದಲ್ಲಿ ಚಿಕ್ಕದಾದ ಕಮಲದ ಮೊಗ್ಗುಗಳ ಸಾಲು ಮತ್ತು ಮೇಲ್ಭಾಗದಲ್ಲಿ ದಂತಪಂಕ್ತಿಯ ಸಾಲುಗಳನ್ನು ಕಾಣಬಹುದು. ದ್ವಾರದ ಕೆಳಭಾಗದ ಇಕ್ಕೆಲಗಳಲ್ಲಿ ದ್ವಾರಪಾಲಕರಾದ ಜಯ–ವಿಜಯರನ್ನು ಕಾಣಬಹುದು. ಈ ದ್ವಾರಪಾಲಕರು ತ್ರಿಭಂಗಿಯಲ್ಲಿ ನಿಂತಿದ್ದು, ಚತುರ್ಭುಜವನ್ನು ಹೊಂದಿ, ನಾಲ್ಕು ಕೈಗಳಲ್ಲಿ ಆಯುಧಗಳನ್ನು ಹಿಡಿದಿದ್ದಾರೆ. ಮೈಮೇಲೆ ವಿವಿಧ ಬಗೆಯ ವಸ್ತ್ರಾಭರಣಗಳಿಂದ ಕೂಡಿದ ಸರ್ವಾಲಂಕರಣಭೂಷಿತರಾಗಿ ಶಿಲ್ಪಿಯು ಸೂಗಸಾಗಿ ಚಿತ್ರಿಸಿದ್ದಾನೆ.

**ತೆರೆದ ಮುಖಮಂಟಪ:** ಈ ಮುಖಮಂಟಪದಲ್ಲಿ 4 ಆಧಾರ ಸ್ತಂಭಗಳಿದ್ದು, ಅವುಗಳಲ್ಲಿ ಎರಡು ಹೊಯ್ಸಳ ಶೈಲಿಯ ವರ್ಧಮಾನ ಸ್ತಂಭಗಳು, ಇನ್ನುಳಿದ ಎರಡು ತಿರುಗು ರಾಟೆಗಳ ಸಹಾಯದಿಂದ ಸಂಪೂರ್ಣವಾಗಿ ಸೋಪುಗಲ್ಲಿನಿಂದ ಕಡೆಯಲಾಗಿದೆ. ಈ ಕಂಬಗಳಲ್ಲಿ ಪೀಠ ದಿಂಡು, ತಡಿ, ಕುಂಭ, ಹಲಗೆ ಚಾಚು ಪೀಠಗಳಿವೆ. ಉರುಳುದಿಂಡಿನ ಮಧ್ಯಭಾಗದಲ್ಲಿ ಗಂಟೆಯಾಕಾರದ ಕೆತ್ತನೆ ಇದೆ. ಗಾಲಿ, ದಿಂಡು, ಪಟ್ಟಿಕೆಗಳು ಸಾಧಾರಣವಾಗಿವೆ. ದಿಂಡಿನ ಮೇಲಿನ ಕುಂಭ ಚಕ್ರಾಕಾರವಾಗಿದೆ. ಮೇಲ್ಭಾಗದಲ್ಲಿ ಮುಷ್ಟಿಬಂಧ ಬೋದಿಗೆ ಇದೆ. ಈ ಬೋದಿಗೆಯಲ್ಲಿ ಅಲ್ಲಲ್ಲಿ ಸುಂದರ ಅಲಂಕರಣೆಗಳ ಕೆತ್ತನೆಯನ್ನು ಕಾಣಬಹುದು. ಮೇಲ್ಛಾವಣಿಯಲ್ಲಿ 3 ಹಂತದಿಂದ ಕೂಡಿದ ಭುವನೇಶ್ವರಿಯಿದ್ದು, ಮೊದಲ ಮತ್ತು ಎರಡನೇ ಹಂತದಲ್ಲಿ ಅರಳಿದ ಕಮಲದ ಕೆತ್ತನೆಯನ್ನು ನೋಡಬಹುದು. ಮೂರನೇ ಹಂತದಲ್ಲಿ ವೃತ್ತಾಕಾರದ ಪದ್ಮಗಳ ಕೆತ್ತನೆ ಹಾಗೂ ಅದರ ಮಧ್ಯಭಾಗದಲ್ಲಿ ಕಮಲದ ಮೊಗ್ಗಿನ ಕೆತ್ತನೆ ಮಾಡಲಾಗಿದೆ. ಮುಖಮಂಟಪದ ಮುಂಭಾಗದಲ್ಲಿ ಇತ್ತೀಚಿಗೆ ನಿರ್ಮಿಸಿರುವ ಸೋಪಾನವನ್ನು ಕಾಣಬಹುದು.

**ಬಲಿಪೀಠ:** ಮುಖಮಂಟಪದ ಮುಂಭಾಗದಲ್ಲಿ ಹೊರ ಪ್ರಾಕಾರದ ಒಳಭಾಗಕ್ಕೆ ಒಂದು ಬಲಿಪೀಠವಿದೆ. ಈ ಬಲಿಪೀಠವು ವೇದಿಬದ್ರ ಉಪಪೀಠದ ಮೇಲೆ ಎತ್ತರವಾಗಿದ್ದು, ನೋಡುವುದಕ್ಕೆ ಆಕರ್ಷಿತವಾಗಿದೆ. ವೇದಿಬದ್ರ ಉಪಪೀಠದ ಮೇಲೆ ಎತ್ತರವಾದ ಅದೋಪದ್ಮದ ಮೇಲೆ ಊರ್ಧ್ವ ಪದ್ಮವಿದೆ. ಇಲ್ಲಿ ದೇವರ ನೈವೇದ್ಯದ ಪ್ರಸಾದವನ್ನು ಪಕ್ಷಿಗಳಿಗೆ ಇಡುತ್ತಿದ್ದರೆಂಬ ಭಾವನೆ ನಮ್ಮ ಹಿಂದೂಗಳಲ್ಲಿ ಇಂದಿಗೂ ಕಾಣಬಹುದಾಗಿದೆ. ಏರುವಿನ್ಯಾಸದಲ್ಲಿ ಈ ದೇವಾಲಯವು ಜಗತಿ, ಅದಿಷ್ಠಾನ, ಭಿತ್ತಿ, ಪ್ರಸ್ತರ, ಗ್ರೀವ, ಶಿಖರ, ಸ್ತೂಪಗಳನ್ನು ಹೊಂದಿದೆ.

**ಜಗತಿ:** ನಕ್ಷಾತ್ರಾಕಾರದ ತಳವಿನ್ಯಾಸವನ್ನು ಹೊಂದಿರುವ 4 ಅಡಿ ಎತ್ತರದ ಜಗತಿಯನ್ನು ದೇವಾಲಯದ ಸುತ್ತಲು ಕಾರಣಬಹುದು. ಈ ಜಗತಿಯಲ್ಲಿ ಉಪಾನ ಜಗತಿ, ಕಂಠ, ಹಾರ, ಕಂತ, ಕಪೋತ, ಇತ್ಯಾದಿ ಭಾಗಗಳಿಂದ ಕೂಡಿದೆ. ಈ ಜಗತಿಯು ಸಂಪೂರ್ಣವಾಗಿ ಶಿಥಿಲವಾದುದರಿಂದ ಜೀರ್ಣೋದ್ಧಾರದ ಸಂಧರ್ಭದಲ್ಲಿ ಮೂಲ ಜಗತಿಯ ಭಾಗಗಳ ಮಾದರಿಯಲ್ಲಿಯೇ ಕೆತ್ತನೆಯನ್ನು ಮಾಡಿ ಇಡಲಾಗಿದೆ.

**ಅಧಿಷ್ಠಾನ;** ಈ ದೇವಾಲಯದ ಅಧಿಷ್ಠಾನ ಭಾಗವು ಸಂಪೂರ್ಣವಾಗಿ ಚಿಕ್ಕಮಗಳೂರು ಜಿಲ್ಲೆಯ ಬೆಳವಾಡಿಯ ವೀರನಾರಾಯಣ ದೇವಾಲಯವನ್ನು ಹೋಲುತ್ತದೆ. ಈ ಅಧಿಷ್ಠಾನದ ಭಾಗವು 4 ಅಡಿ ಎತ್ತರವಾಗಿದ್ದು, ಉಪಾನ, ಜಗತಿ, ಚೂಪುಕುಮುಟಗಳ ದಂತಪಂಕ್ತಿ, ಕಪೋತ ಅಥವಾ ವ್ಯಾಳ ಕಪೋತ ಮತ್ತು ಪ್ರತಿ ಎಂಬ ಭಾಗಗಳನ್ನು ಹೊಂದಿರುವ ವ್ಯಾಳ ಅಥವಾ ದಂತಪಲಕ್ತಿ ಅಧಿಷ್ಠಾನವಾಗಿದೆ. ದೇವಾಲಯದ ಸುತ್ತಲೂ ಒಂದೇ ಮಾದರಿಯ ಅಧಿಷ್ಠಾನವನ್ನು ನಿರ್ಮಿಸಲಾಗಿದೆ. ಮುಖ್ಯ ಗರ್ಭಗುಡಿಯ ಎಡಭಾಗಕ್ಕೆ ಒಂದು ಜಲಪ್ರನಾಳವಿದೆ. ಅದು ದೇವಾಲಯದ ಅಧಿಷ್ಠಾನದ ಉತ್ತರ ದಿಕ್ಕಿನ ಕುಮುದದ ಭಾಗದಲ್ಲಿ ಹೊರಬಂದಿರುವ ಲಂಬಾಕೃತವಾಗಿರುವಂತೆ ಕೆತ್ತನೆಯನ್ನು ಹೊಂದಿದ್ದು, ಪ್ರನಾಳದಿಂದ ಹೊರಬಂದ ನೀರು ಜಗತಿಯ ಮುಖಾಂತರ ಭೂಮಿಗೆ ಸೇರುವಂತೆ ಕೆತ್ತನೆಯನ್ನು ಮಾಡಲಾಗಿದೆ. ನವರಂಗವನ್ನು ಗರ್ಭಗೃಹಗಳಿಗೆ ಹೊಂದಿಕೊಂಡಂತೆ ಎಡಭಾಗಕ್ಕೆ ಒಂದೊಂದು ಜಲಪ್ರನಾಳವಿದೆ. ಇನ್ನುಳಿದಂತೆ ಅಧಿಷ್ಠಾನದಲ್ಲಿ ಯಾವುದೇ ರೀತಿಯ ಕೆತ್ತನೆಗಳು ಕಂಡುಬರುವುದಿಲ್ಲ ಹಾಗೂ ಈ ಅಧಿಷ್ಠಾನವು ಹಿನ್ಸರಿತ ಮತ್ತು ಮುನ್ಸರಿತದಿಂದ ಕೂಡಿದೆ.

**ಭಿತ್ತಿ:** ಅಧಿಷ್ಠಾನದ ಮೇಲ್ಭಾಗದಲ್ಲಿರುವ ಭಿತ್ತಿಯು 10 ಅಡಿ ಎತ್ತರವಾಗಿದೆ. ಈ ಭಿತ್ತಿಯಲ್ಲಿ ಚಿಕ್ಕದಾದ ಗೋಪುರ ಮಾದರಿಯ ಅಲಂಕಾರಿಕ ಸ್ತಂಭಗಳಿವೆ. ಈ ಸ್ತಂಭಗಳು ಬ್ರಹ್ಮಕಾಂತ ಸ್ತಂಭಗಳಾಗಿದ್ದು, ತಡಿಯನ್ನಾಗಲಿ, ಮಂಡಿ ಫಲಕಗಳನ್ನಾಗಲಿ ಹೊಂದಿಲ್ಲದೆ ತುದಿಯಲ್ಲಿ ಘಂಟಾಕಾರವನ್ನು ಹೊಂದಿದ್ದು, ಮೇಲ್ಭಾಗದಲ್ಲಿ ಸರಳ ಅಲಂಕರಣೆಯನ್ನು ಹೊಂದಿರುವ ಬೋದಿಗೆಯನ್ನು ಕಾಣಬಹುದು.

ಭಿತ್ತಿಯಲ್ಲಿ ಆಕರ್ಷಕವಾದ ಹೊಯ್ಸಳ ಶೈಲಿಯ ಗೋಪುರ ಮಾದರಿಯ ಕೋಷ್ಠಪಂಜರಗಳಿವೆ. ಈ ಕೋಷ್ಠ ಪಂಜರಗಳಲ್ಲಿ ಚಿಕ್ಕದಾದ ಎರಡು ಅಲಂಕಾರಿಕ ಕಂಬಗಳಿವೆ. ಮೇಲ್ಭಾಗದಲ್ಲಿ ಪಂಚತಲವನ್ನು ಹೊಂದಿರುವ ಗೋಪುರವನ್ನು ಕಾಣಬಹುದು. ಈ ಕೋಷ್ಠಪಂಜರದ ಮೇಲ್ಭಾಗದಲ್ಲಿ ಸ್ತೂಪಿಯನ್ನು ಸಹ ಕೆತ್ತಲಾಗಿದೆ. ಕೋಷ್ಠಪಂಜರ ಹಾಗೂ ಸ್ತಂಭಪಂಜರದ ಮಧ್ಯದಲ್ಲಿ ಒಂದೇ ಕಂಬದ ಮೇಲೆ ಗೋಪುರ ಮಾದರಿಯ ಶಿಖರಗಳಿರುವುದನ್ನು ಕಾಣಬಹುದು. ಈ ಸ್ತಂಭಪಂಜರದ ಮಧ್ಯದಲ್ಲಿ ನಾಭಿಯ ಉಬ್ಬು ಕೆತ್ತನೆಗಳನ್ನು ಸಹ ಕಾಣಬಹುದಾಗಿದೆ.

**ಪ್ರಸ್ತರ:** ಭಿತ್ತಿಯ ಮೇಲ್ಭಾಗದ ಪ್ರಸ್ತರದ ಭಾಗವು ಕಪೋತ, ಹಾರಗಳ ಕೆತ್ತನೆಗಳನ್ನು ಹೊಂದಿದ್ದು, ದೇವಾಲಯದ ಸುತ್ತಲು ಇದೇ ಮಾದರಿಯಲ್ಲಿ ಮಂದುವರಿದಿದ್ದ ಮಳೆಯ ನೀರು ದೇವಾಲಯದ ಮೇಲೆ ಬೀಳದಂತೆ ತಡೆಯುವ ಕಪೋತದ ಭಾಗವನ್ನು ನಿರ್ಮಿಸಲಾಗಿದೆ. ಕಪೋತವು ಭಿತ್ತಿಯ ಮೇಲ್ಭಾಗದಲ್ಲಿದ್ದು ನಯವಾದ ಕೆತ್ತನೆಯಿಂದ ಕೂಡಿ ಇಳಿಜಾರಾಗಿದೆ. ಕಪೋತದ ಮಧ್ಯಭಾಗದ ಅಲ್ಲಲ್ಲಿ ಕೆತ್ತನೆ ಮಾಡಲಾಗಿದೆ. ಸಾಮಾನ್ಯವಾಗಿ ಹೊಯ್ಸಳ ಕಪೋತಗಳು ಇಳಿಜಾರಾಗಿ ಕಲ್ಲಿನ ಚಪ್ಪಡಿಗಳಿಂದ ರಚಿತವಾಗಿರುತ್ತವೆ ಮತ್ತು ಅಲಂಕರಣೆಯಲ್ಲಿ ಹೆಚ್ಚು ಕೂರಿಸಿದ ಸಂಕೀರ್ಣವಾಗಿರುತ್ತವೆ. ಮುನ್ಸರಿತದಲ್ಲಿ ಕುಸುರಿ ಕೆಲಸದಂತಹ ಮುಕ್ತಾಗ್ರಾಸಗಳು, ಚಾವಣಿಯ ಕಟ್ಟಿಸಿ ಅಲಂಕರಣೆ ಇತ್ಯಾದಿಗಳಿಂದ ಕೂಡಿರುತ್ತವೆ ಎಂಬುದನ್ನು ಈ ದೇವಾಲಯದ ಕಪೋತವು ಸಾಕ್ಷಿಯಾಗಿದೆ. ಈ ದೇವಾಲಯದ ಸುತ್ತಲು ಸಹ ಇದೇ ಮಾದರಿಯ ಕಪೋತವಿದೆ.

ಪ್ರಸ್ತರದಲ್ಲಿ ಉತ್ತರ, ವಲಭಿ, ಕಪೋತ ಮತ್ತು ವಾಜನ ಎಂಬ ಪ್ರಮುಖವಾಗಿ ಮೂರು ಭಾಗಗಳಿದ್ದು, ಕಪೋತದ ಮೇಲಿನ ಅಂಗವೇ ವಾಜನ ಆಗಿದೆ.

**ಗ್ರೀವ:** ಪ್ರಸ್ತರದ ಮೇಲ್ಭಾಗವಾದ ಗ್ರೀವದಲ್ಲಿ ಅಲಂಕಾರಿಕವಾದ ಸ್ತಂಭ ಪಂಜರಗಳು ಮತ್ತು ದೇವಕೋಷ್ಠಕಗಳನ್ನು ನಯವಾದ ಕೆತ್ತನೆಗಳಿಂದ ನಿರ್ಮಿಸಲಾಗಿದೆ.

**ಶಿಖರ:** ಗರ್ಭಗೃಹದ ಮೇಲ್ಭಾಗದಲ್ಲಿ 15 ಅಡಿ ಎತ್ತರದ ಶಿಖರವನ್ನು ಕಾಣಬಹುದು. ಈ ಶಿಖರವು ಪಂಚತಲಗಳಿಂದ ಕೂಡಿದ್ದು, ಶಿಖರದ ಮಧ್ಯ ಭಾಗದಲ್ಲಿ ಸಾಲುದಂತಪಂಕ್ತಿ, ಮಹಾನಾಸಿ, ಅಲಂಕಾರಿಕ ಅರೆಗಂಭಗಳು ಇತ್ಯಾದಿ ಕೆತ್ತನೆಗಳನ್ನು ಕಾಣಬಹುದು. ಇದರ ಮೇಲ್ಭಾಗದಲ್ಲಿ ಊರ್ದ್ವಪದ್ಮದ ಆಮಲಕ, ಅದರ ಮೇಲ್ಭಾಗದಲ್ಲಿ ಕಳಸವಿದೆ.

**ದ್ವಾರಮಂಟಪ:** ದೇವಾಲಯದ ಮುಂಭಾಗದಲ್ಲಿ ದೇವಾಲಯಕ್ಕೆ ಪ್ರವೇಶ ಕಲ್ಪಿಸಲು ಒಂದು ದ್ವಾರಮಂಟಪವನ್ನು ನಿರ್ಮಿಸಲಾಗಿದೆ. ಆರು ಸ್ತಂಭಗನ್ನೊಳಗೊಂಡ ಮತ್ತು ಎರಡು ಅಂಕಣ ಆಳವಾಗಿರುವ ಮಂಟಪವಾಗಿದ್ದು, ಈ ದ್ವಾರಮಂಟಪದ ಕಂಬಗಳು ಸಾಧಾರಣವಾಗಿದ್ದು, ಚೌಕಾಕಾರದ ಪೀಠವನ್ನು ಹೊಂದಿವೆ. ಅದರ ಮೇಲೆ ಅಷ್ಟಮುಖದ ದಿಂಡನ್ನು ಹೊಂದಿದ್ದು. ಮೇಲ್ಭಾಗದಲ್ಲಿ ಕೇವಲ ಆಧಾರ ಪೋತಿಕೆಗಳನ್ನು ಮಾತ್ರ ನಿರ್ಮಾಣ ಮಾಡಲಾಗಿದೆ.

## ಪರಾಮರ್ಶನ ಗ್ರಂಥಗಳು


1. ಅರ್ಪಣ. ಕೂ.ಸ., ದೇವಾಲಯ ವಾಸ್ತುಶಿಲ್ಪ ಪರಿಚಯ, ಹಂಪಿ, 1999.
2. ಅನಂತ ರಂಗಾಚಾರ್ಯ. ಎನ್., ಕರ್ನಾಟಕ ವಾಸ್ತುಶಿಲ್ಪ, ಮೈಸೂರು, 1972.
3. ಗೋಪಾಲ್ ಬಾ.ರ. ಮತ್ತು ಇತರರು., ಕರ್ನಾಟಕದ ಕಲೆ, ವಾಸ್ತು (ಸಂಪುಟ–4)ಬೆಂಗಳೂರು, 1993.
4. ಗೋಪಾಲ್.ಆರ್(ಸಂ).,ತುಮಕೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ,ಮೈಸೂರು, 2008.
5. ಕನ್ನಡ ವಿಷಯ ವಿಶ್ವಕೋಶ ಸಂಪುಟ–1, ಮೈಸೂರು ವಿಶ್ವವಿದ್ಯಾಲಯ, ಮೈಸೂರು.
6. ಕರ್ನಾಟಕ ಗೆಜೆಟಿಯರ್, ಭಾಗ –1 (ಸಂ) ಸೂರ್ಯನಾಥ್ ಯು ಕಾಮತ್, 1984.
7. ಕರ್ನಾಟಕ ಗೆಜೆಟಿಯರ್, ಭಾಗ–3 ಸಂ) ಸೂರ್ಯನಾಥ್ ಯು ಕಾಮತ್, 1986.
8. ನಾಯಕ್ ಹಾ.ಮಾ., ಕನ್ನಡ ವಿಷಯ ವಿಶ್ವಕೋಶ. ಕು. ಕ. ಅ. ಸಂ., ಮೈಸೂರು, ವಿಶ್ವವಿದ್ಯಾನಿಲಯ, ಮೈಸೂರು, 1972.
9. ಶ್ರೀಕಂಠ ಶಾಸ್ತ್ರಿ. ಎಸ್., ಹೊಯ್ಸಳ ವಾಸ್ತುಶಿಲ್ಪ ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 1965.
10. ಎಪಿಗ್ರಾಫಿಯಾ ಕರ್ನಾಟಿಕ ಸಂಪುಟ–24, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ವಿಶ್ವವಿದ್ಯಾನಿಲಯ, ಮೈಸೂರು, 2009